ಸಿಂಧಗೀ ತಾಲ್ಲೂಕಿನ ಬಿಜಲಬಾವಿ ಗ್ರಾಮಕ್ಕೆ ಕುಡಿಯಂವ ನೀರನ್ನ ಒದಗಿಸಂವುದು

೬೫೨ (೧೫೨೩) ಶ್ರೀ ಮಲ್ಲನಗೌಡ ಬಿರಾದಾರ (ಸಿಂದಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಿಂದಗಿ ತಾಲ್ಲೂಕಿನ ಬಿಜಲಬಾವಿ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಗೆ ಯಾವಾಗ ಮಂಜೂರಾಯಿತು ?

ಆ) ಈ ಯೋಜನೆ ಅನುಷ್ಟಾನಕ್ಕೆ ಬಂದಿಲ್ಲವಾದ್ದರಿಂದ ಅಲ್ಲಿನ ಜನತೆಗೆ ನಾರುಹುಣ್ಣಿನ ತೊಂದರೆಯಾದದ್ದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಇ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ೧೫-೩-೧೯೭೧.

ಆ) ಬಂದಿಗೆ.

ಇ) ಈ ಯೋಜನೆಯನ್ನು ೩೧-೩-೧೯೮೬ರ ಒಳಗೆ ಕಾರ್ಯಗತಗೊಳಿಸಲಾಗುವುದು.

SHIFTING OF OFFICE OF DEPUTY DIRECTOR OF AGRICULTURE AND SOIL CONSERRATION TO SOMWARPET

653 (1535) SRI D.A.CHINNAPPA (Madikeri).—will the Minister of State for Agriculture be pleased the State :—

a) Whether it is not a fact that Government have shifted the Office of the Deputy Director of Agriculture, Soil Conservation, from District Headquarters Madikeri to Taluk Headquarters Somawarpet ?

b) the reasons for the same?

c) Whether it has come to the notice of the Government that six Grama Sevak's posts are not filled up.

d) if so, whether the Government would take action to fill up these posts ?

SRI M. P. PRAKASH (Minister of State for Agriculture).—

a) No, it is not a fact.

b) Does not arise.

c) Yes.

d) Yes.

ಮಾಲೂರು ತಾಲ್ಲೂಕಿನ ಪ್ರೌಢಶಾಲೆಗಳಲ್ಲಿರುವ ಸ್ಥಳಾವಕಾಶ

೬೫೫ (೧೫೪೯) ಶ್ರೀ ಹೆಚ್. ಬಿ. ದ್ಯಾವರಪ್ಪ (ಮಾಲೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಮಾಲೂರು ತಾಲ್ಲೂಕಿನ ಪ್ರತೀ ಪ್ರೌಢ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?